(ಇಂದು ದಿನಾಂಕ 21.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರಿದ ಪಾಟೀ ಸವಾಲು:- ವಾದಿ ಪರ ಶ್ರೀ. ಎಂ ಪಿ ವಕೀಲರಿಂದ:-**

7. ಒಟ್ಟು ಕುಟುಂಬದ ಆಸ್ತಿಯಲ್ಲಿ ದ್ರಾಕ್ಷಿ ಬೆಳೆಯಿಂದ ಆದಾಯ ಬರುತ್ತಿತ್ತು ಎಂದರೆ 2 ವರ್ಷ ನಾವು ತೆಗೆದುಕೊಂಡಿದ್ದೇವೆ ನಂತರ ಜಮೀನನ್ನು ಚಿಕ್ಕಪ್ಪ ತೆಗೆದುಕೊಂಡಿರುತ್ತಾರೆ. ದ್ರಾಕ್ಷಿ ಬೆಳೆಯನ್ನು ಸರ್ವೆ ನಂ. 14/1 ಮತ್ತು 15/1 ರಲ್ಲಿ ಬೆಳೆಯುತ್ತಿದ್ದರು ಎಂದರೆ ಸರಿ. 2003 ರ ತನಕ ಸದರಿ ಆಸ್ತಿಯಲ್ಲಿ ದ್ರಾಕ್ಷಿ ಬೆಳೆಯ ವ್ಯವಸಾಯವನ್ನು ನೀವು ನೋಡಿಕೊಳ್ಳುತ್ತಿದ್ದಿರ ಅಥವಾ ನಿಮ್ಮ ತಂದೆ ನೋಡಿಕೊಳ್ಳುತ್ತಿದ್ದರಾ ಎಂದರೆ ಸಾಕ್ಷಿಯು ನಾವು ನೋಡಿಕೊಳ್ಳುತ್ತಿದ್ದೆವು ಎಂದು ಹೇಳುತ್ತಾರೆ. ಒಟ್ಟು ಕುಟುಂಬಕ್ಕೆ ತೆಂಗಿನ ಮರದಿಂದ ಆದಾಯ ಬರುತ್ತಿತ್ತು ಎಂದರೆ ಸರಿಯಲ್ಲ. ತೆಂಗಿನ ಮರಗಳು ಈಗಲೂ ಇವೆ ಎಂದರೆ ಸರಿ ಆದರೆ ಅದು ಚಿಕ್ಕಪ್ಪನ ಭಾಗದಲ್ಲಿ ಇದೆ. ಹುಣಸೇ ಮರಗಳಿಂದಲೂ ಸಹ ಆದಾಯ ಬರುತ್ತಿತ್ತು ಎಂದರೆ ಸಾಕ್ಷಿಯು 1984 ರಲ್ಲೆ ಅದನ್ನು ಚಿಕ್ಕಪ್ಪನ ಕಡೆಗೆ ಹೋಗಿತ್ತು ಅವರೇ ಅದನ್ನು ತೆಗೆದುಕೊಳ್ಳುತ್ತಿದ್ದರು. ಹುಣಸೇ ಮರಗಳು ಈಗಲೂ ಇದೆ ಎಂದರೆ ಸರಿಯಲ್ಲ. 1990 ರ ತನಕ ಹುಣಸೇ ಮರಗಳು ಇದ್ದವು. ಅದು ಯಾವ ಸರ್ವೆ ನಂಬರ್ ನಲ್ಲಿ ಇತ್ತು ಎಂದು ಮರೆತುಹೋಗಿದೆ. ನನ್ನ ಪ್ರಕಾರ ಹುಣಸೇ ಮರಗಳು ಸರ್ವೆ ನಂ. 14/1 ಮತ್ತು 15/1 ರಲ್ಲಿ ಅಲ್ಲ ಎಂದರೆ ಸರಿ. ಒಟ್ಟು ಕುಟುಂಬಕ್ಕೆ ನೀಲಗಿರಿ ಮತ್ತು ಸರ್ವೆ ತೋಪು ಮತ್ತು ಇತರೆ ಬೆಳೆಗಳಿಂದ ಆದಾಯ ಬರುತ್ತಿತ್ತು ಎಂದರೆ ಸಾಕ್ಷಿಯು 1972 ರಲ್ಲಿ ಅವುಗಳನ್ನೆಲ್ಲ ಕಡಿದು ನನ್ನ ತಂದೆ ಅವುಗಳನ್ನೆಲ್ಲ ನನ್ನ ಚಿಕ್ಕಪ್ಪನ ಪಾಲಿಗೆ ಕೊಟ್ಟಿರುತ್ತಾರೆ. ಸರ್ವೆ ನಂ. 14/1 ಮತ್ತು 15/1 ಹೊರತುಪಡಿಸಿ ದಾವಾ ಆಸ್ತಿಗಳಲ್ಲಿ ನೀಲಗಿರಿ ಮತ್ತು ಸರ್ವೆ ತೋಪು ಇತರ ಬೆಳೆಗಳು ಇತ್ತು ಎಂದರೆ ಸರಿ. ಆದರೆ ಅದು 1972 ರಲ್ಲಿ ಚಿಕ್ಕಪ್ಪನಿಗೆ ಹೋಗಿರುತ್ತವೆ. ಅದರ ಜೊತೆಗೆ ಒಟ್ಟು ಕುಟುಂಬಕ್ಕೆ ಫ್ಲೋರ್ ಮಿಲ್ ಆದಾಯ ಇತ್ತು ಎಂದರೆ ಸಾಕ್ಷಿಯು ನನ್ನ ತಾಯಿಯ ಕುಟುಂಬಕ್ಕೆ ಮಾತ್ರ ಇತ್ತು ಎಂದು ಹೇಳುತ್ತಾರೆ. ಒಟ್ಟು ಕುಟುಂಬದಿಂದ ಬಂದ ಆದಾಯದಿಂದ ನನ್ನ ಚಿಕ್ಕಪ್ಪ ಕ್ಲಾತ್ ಬಿಸಿನೆಸ್ ಪ್ರಾರಂಭಿಸಿರುತ್ತಾರೆ ಎಂದರೆ ಸಾಕ್ಷಿಯು ಕ್ಲಾತ್ ಬಿಸಿನೆಸ್ ಅದಕ್ಕಿಂತ ಮೊದಲೇ ಪ್ರಾರಂಭಿಸಿದ್ದರು ಎಂದು ಹೇಳುತ್ತಾರೆ. ಸದರಿ ಆದಾಯದಿಂದ ನನ್ನ ಚಿಕ್ಕಪ್ಪ ದಾವಾ ಆಸ್ತಿ ಐಟಂ ನಂ. 16, 23 ಮತ್ತು 24 ನ್ನು ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎಂದು ಹೇಳುತ್ತಾರೆ.

8. ಕ್ಲಾತ್ ಬಿಸಿನೆಸ್ ಅನ್ನು ಸಹ ಕುಟುಂಬದ ಆದಾಯದಿಂದ ಶುರು ಮಾಡಿರುತ್ತಾರೆ ಎಂದರೆ ಸರಿ. ನನ್ನ ಸಣ್ಣ ತಮ್ಮ ನಿರಂಜನ್ ಅವರ ಮದುವೆಯು 2004 ರಲ್ಲಿ ಆಗಿರುತ್ತದೆ. ನನ್ನ ತಂಗಿ ಜಯಶ್ರೀ ಅವರ ಮದುವೆ 1989-90 ರಲ್ಲಿ ಆಗಿರುತ್ತದೆ. ಈ ಒಂದು ಜಮೀನಿನ ವ್ಯವಸಾಯದ ಖರ್ಚು ವೆಚ್ಚಗಳನ್ನು ನನ್ನ ಚಿಕ್ಕಪ್ಪ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪ ನನ್ನ ತಮ್ಮ ಮತ್ತು ತಂಗಿಯ ಮದುವೆಗೆ ಯಾವುದೇ ಹಣ ಕೊಟ್ಟಿರುವುದಿಲ್ಲ. 1972 ರಲ್ಲಿ ಭಾಗ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1984 , 1999 ಮತ್ತು 2003 ರ ಭಾಗ ಆಗುವಾಗ ವಾದಿಯರಿಗೂ ಸಹ ದಾವಾ ಆಸ್ತಿಯಲ್ಲಿ ಭಾಗದ ಹಕ್ಕು ಇತ್ತು ಎಂದರೆ ಸಾಕ್ಷಿಯು ವಾದಿಯು ಅವರ ತಂದೆಯ ಹತ್ತಿರ ಕೇಳಬೇಕು ಎಂದು ಹೇಳುತ್ತಾರೆ. ಮೇಲೆ ಹೇಳಿದ ಮೂರು ಭಾಗ ಪತ್ರಗಳು ಆಗುವಾಗ ಅಥವಾ ಆದ ನಂತರ ಅದನ್ನು ವಾದಿಯರಿಗೆ ತಿಳಿಸಿರುತ್ತೀರಾ ಎಂದರೆ ಸಾಕ್ಷಿಯು ತಿಳಿಸಿರುವುದಿಲ್ಲ ಎಂದು ಹೇಳುತ್ತಾರೆ. ಭಾಗ ಆಗುವಾಗ ವಾದಿಯರಿಗೂ ಸಹ ಭಾಗದ ಹಕ್ಕು ಇತ್ತು ಎಂದು ನನಗೆ ಗೊತ್ತಿತ್ತು ಎಂದರೆ ಸಾಕ್ಷಿಯು ವಾದಿಯರಿಗೆ ಅವರ ತಂದೆಯ ಆಸ್ತಿಯಲ್ಲಿ ನನ್ನ ಆಸ್ತಿಯಲ್ಲಿ ಹಕ್ಕು ಇಲ್ಲ ಎಂದು ಹೇಳುತ್ತಾರೆ. ವಾದಿಯರಿಗೆ ಭಾಗಾಂಶದ ಹಕ್ಕು ಇದೆ ಎಂದು ಗೊತ್ತಿತ್ತು ಆದರೆ ಅವರ ತಂದೆಯ ಆಸ್ತಿಯಲ್ಲಿ ಹಕ್ಕು ಇದೆ. ವಾದಿಯರ ತಂದೆ ವಾದಿಯರಿಗೆ ಪಾಲು ಕೊಡುತ್ತೇವೆ ಎಂದು ಹೇಳಿದ ಕಾರಣ ವಾದಿಯ ತಂದೆಯನ್ನು ವಿಭಾಗ ಪತ್ರದಲ್ಲಿ ಸೇರಿಸಿರುವುದರಿಂದ ಅವರ ಮಕ್ಕಳನ್ನು ವಿಭಾಗ ಪತ್ರದಲ್ಲಿ ಸೇರಿಸಿರುವುದಿಲ್ಲ. ವಾದಿಯರು ಅವರ ತಂದೆಯ ಪೋಷಣೆಯಲ್ಲಿ ಇರಲಿಲ್ಲ ಎಂದರೆ ಅದು ಅವರಿಗೆ ಬಿಟ್ಟದ್ದು ಎಂದು ಹೇಳುತ್ತಾರೆ. ಭಾಗಾಂಶದ ಹಕ್ಕು ಇರುವ ಎಲ್ಲಾ ಪಕ್ಷಗಾರರ ಒಪ್ಪಿ ಗೆ ಇಲ್ಲದೇ ಇದ್ದ ಪಕ್ಷದಲ್ಲಿ ಭಾಗ ಕೋರಿ ನ್ಯಾಯಾಲಯಕ್ಕೆ ಹೋಗಬೇಕು ಎಂದರೆ ಸರಿಯಲ್ಲ. 1999 ರ ವಿಭಾಗ ಆಗುವಾಗ ಬಹುಶಃ ನನ್ನ ಅಜ್ಜಿ ಅಂದರೆ ತಂದೆಯ ತಾಯಿ ತೀರಿಕೊಂಡಿರಬೇಕು ಸರಿಯಾಗಿ ನೆನಪಿಲ್ಲ. 1999 ರ ವಿಭಾಗದಲ್ಲಿ ರಾಜಣ್ಣರವರಿಗೆ ಕಡಿಮೆ ಆಸ್ತಿ ಮತ್ತು ನನ್ನ ತಂದೆಗೆ ಜಾಸ್ತಿ ಆಸ್ತಿ ತೋರಿಸಿರುತ್ತಾರೆ ಎಂದರೆ ಸರಿ . ಸಾಕ್ಷಿಯು ಮುಂದುವರಿದು ಬಿಟಿಎಂ ಲೇಔಟ್ , ಎನ್ ಎಸ್ ಪಾಳ್ಯ, ಸಾರಕ್ಕಿ, ಆನೇಕಲ್‌ನಲ್ಲಿ ಆಸ್ತಿಗಳು ರಾಜಣ್ಣರವರಿಗೆ ನನ್ನ ತಂದೆಯವರು ಕೊಡಿಸಿರುವ ಕಾರಣ ನನಗೆ ಇಷ್ಟೇ ಆಸ್ತಿಗಳು ಸಾಕು ಎಂದು ಕಡಿಮೆ ಆಸ್ತಿಯನ್ನು ಅವರ ಪಾಲಿಗೆ ತೆಗೆದುಕೊಂಡಿರುತ್ತಾರೆ. ಸರ್ವೆ ನಂ. 30/3 ಕ್ಷೇತ್ರ 14 ಗುಂಟೆ ಆಸ್ತಿಯನ್ನು ಸಹ ರಾಜಣ್ಣರವರಿಗೆ ಕೊಟ್ಟಿರುವ ಕಾರಣ 1999 ರ ವಿಭಾಗದಲ್ಲಿ ಅವರಿಗೆ ಕಡಿಮೆ ಆಸ್ತಿ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎಂದು ಹೇಳುತ್ತಾರೆ. ವಾದಿಯರಿಗೆ ಮೋಸ ಮಾಡುವ

ಉದ್ದೇಶದಿಂದ ನಾನು ನನ್ನ ತಂದೆ ಮತ್ತು ಚಿಕ್ಕಪ್ಪ ಎಲ್ಲರೂ ಸೇರಿ 1984, 1999 ಮತ್ತು 2003 ರ ವಿಭಾಗ ಪತ್ರಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಪಿತ್ರಾರ್ಜಿತ ಆಸ್ತಿಗಳಾಗಿರುವುದರಿಂದ ವಾದಿಯರಿಗೂ ಸಹ ಅದರಲ್ಲಿ ಭಾಗಾಂಶದ ಹಕ್ಕು ಇದೆ ಎಂದರೆ ಸರಿಯಲ್ಲ. ಈ ದಾವೆ ಹಾಕುವ ಕಾಲಕ್ಕೆ ವಾದಿಯರಿಗೆ ಸದರಿ ವಿಭಾಗ ಪತ್ರಗಳ ಬಗ್ಗೆ ಗೊತ್ತಾದ ನಂತರ ಈ ದಾವೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಅಂಬಿಕಾ ರವರ ಜೊತೆ ರಾಜಣ್ಣ ಅನೈತಿಕ ಸಂಬಂಧ ಇಟ್ಟುಕೊಂಡಿದ್ದರು ಎಂದರೆ ಸಾಕ್ಷಿಯು ರಾಜಣ್ಣ ಅಂಬಿಕಾರವರನ್ನು 2ನೇ ಮದುವೆ ಆಗಿರುತ್ತಾರೆ ಎಂದು ಹೇಳುತ್ತಾರೆ. ಅಕ್ರಮ ಸಂಬಂಧದಿಂದ ಹುಟ್ಟಿದ ಮಕ್ಕಳಿಗೆ ದಾವಾ ಆಸ್ತಿಯಲ್ಲಿ ಹಕ್ಕು ಇಲ್ಲ ಎಂದರೆ ಸರಿಯಲ್ಲ. ರಾಜಣ್ಣ ಮತ್ತು ಅವರ ಅನೈತಿಕ ಮಕ್ಕಳ ಜೊತೆ ಶಾಮೀಲಾಗಿ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ,
ಆನೇಕಲ್.